MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 12-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬಿಗು ಪೂರೈಕೆಯ ನಿರೀಕ್ಷೆಯಿಂದ ಜಾಗತಿಕ ಕಾಫಿ ದರ ತೀವ್ರ ಹೆಚ್ಚಳ

11.4.2023 ರಂದು ಮೇ ಅರೆಬಿಕಾ ಕಾಫಿ ದರ 7.90 ಹೆಚ್ಚಳ(4.33 ಶೇಕಡಾ) ಮೇ ICE ರಾಬೆಸ್ಟಾ ಕಾಫಿ ದರ 104 ಹೆಚ್ಚಳ (4.52 ಶೇಕಡಾ) ಕಂಡಿದೆ. ಜಾಗತಿಕ ಪೂರೈಕೆ ಬಿಗುವಾಗುವ ಸಾಧ್ಯತೆ ಗಳಿಂದ ಅರೆಬಿಕಾ ಕಾಫಿ ದರ 6 ವಾರಗಳ ಗರಿಷ್ಠ ಮಟ್ಟ ಹಾಗೂ ರಾಬೆಸ್ಟಾ ಕಾಫಿ 3 ತಿಂಗಳ ಗರಿಷ್ಠ ಮಟ್ಟಕ್ಕೇರಿತೆನ್ನಲಾಗಿದೆ. ಅಂತರಾಷ್ಟ್ರೀಯ ಕಾಫಿ ಸಂಸ್ಥೆ ಪ್ರಕಾರ (ICO) ಜಾಗತಿಕ ಕಾಫಿ ರಫ್ತು 2022 ಅಕ್ಟೋಬರ್ ನಿಂದ 2023 ಫೆಬ್ರವರಿ ಅವಧಿಯಲ್ಲಿ 8.7 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. (ಹಿಂದಿನ ವರ್ಷದ ಇದೇ ಅವಧಿಗಿಂತ) ಗ್ವಾಟೇಮಾಲಾದ ಕಾಫಿ ರಫ್ತು ಹಿಂದಿನ ವರ್ಷಕ್ಕಿಂತ 8 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಕೊಲಂಬಿಯಾದ ರಫ್ತು 6 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಬ್ರೆಜಿಲ್‌ನ ಫೆಬ್ರವರಿ ಹಸಿರು ಕಾಫಿ ರಫ್ತು 35.8 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಬ್ರೆಜಿಲ್‌ನ ಈ ವರ್ಷದ ಉತ್ಪಾದನೆ ಹಾಗೂ ರಫ್ತು ಹೆಚ್ಚಳವಾಗಲಿದೆಯೆನ್ನಲಾಗಿದೆ.

## 2 ಮಿಲಿಯನ್ ಟನ್ ಅಕ್ಕಿ ಆಮದು ಮಾಡಲಿರುವ ಇಂಡೋನೇಶಿಯಾ

ಬರ ಪರಿಸ್ಥಿತಿಯನ್ನು ನಿಭಾಯಿಸಲು ಇಂಡೋನೇಶಿಯಾ 2 ಮಿಲಿಯನ್ ಟನ್ ಅಕ್ಕಿ ಆಮದು ಮಾಡಲಿದೆಯೆನ್ನಲಾಗಿದೆ.

## ಅಕ್ಕಿ ಹೊಟ್ಟಿಗೆ ರಫ್ತು ತೆರಿಗೆ ವಿನಾಯಿತಿ

ಕೇಂದ್ರ ಸರಕಾರ ಅಕ್ಕಿ ಹೊಟ್ಟಿನ ಮೇಲಿನ 20 ಶೇಕಡಾ ರಫ್ತು ತೆರಿಗೆಯಿಂದ ವಿನಾಯತಿ ನೀಡಿದೆಯೆನ್ನಲಾಗಿದೆ.

## ಅಗಾಧ ರಫ್ತು ಬೇಡಿಕೆಯಿಂದ ಕೆಂಪು ಮೆಣಸಿನಕಾಯಿ ದರ ಹೆಚ್ಚಳದಲ್ಲಿ

ಚೈನಾ, ಬಾಂಗ್ಲಾ ದೇಶ, ಇಂಡೋನೇಶಿಯಾ ಮತ್ತು ಯು.ಎ.ಇ ಗಳಿಂದ ಕೆಂಪು ಮೆಣಸಿನಕಾಯಿಗೆ ಅಗಾಧ ಬೇಡಿಕೆಯಿದೆಯೆನ್ನಲಾಗಿದೆ. ಅಕಾಲಿಕ ಮಳೆ ಮೆಣಸಿನಕಾಯಿ ಬೆಳೆಯುವ ರಾಜ್ಯದಲ್ಲಿ ಬೆಳೆಗೆ ಹಾನಿ ಮಾಡಿದೆಯೆನ್ನಲಾಗಿದೆ. ಇದುವರೆಗೆ ದೇಶೀ ಖರೀದಿದಾರರು ದರ ಇಳಿಕೆಯಾಗಲು ಕಾಯುತ್ತಿದ್ದರೂ ದರ ಇಳಿಕಯಾಗಿರುವುದರಿಂದ ಖರೀದಿಗೆ ಆರಂಭಿಸಿರುವುದರಿಂದ ದೇಶೀ ಹಾಗೂ ರಫ್ತು ಬೇಡಿಕೆ ಹೆಚ್ಚಳವಿದ್ದು ದರ ಇಳಿಕಯಾಗದೆ ಹೆಚ್ಚಳದಲ್ಲೇ ಮುಂದುವರಿದಿದೆ. ಖರೀದಿದಾರರು ನೇರ ರೈತರ ಬೆಳೆಯುವ ಪ್ರದೇಶಗಳಿಂದ ಖರೀದಿ ಮಾಡಲಾರಂಭಿಸಿದುದರಿಂದ ಮಾರುಕಟ್ಟೆಗಳಿಗೆ ಆವಕವಾಗುತ್ತಿರುವ ಮೆಣಸಿನಕಾಯಿ ಪ್ರಮಾಣ ಇಳಿಕೆಯಾಗಿದೆಯೆನ್ನಲಾಗಿದೆ.

## ಹೈದರಾಬಾದ್‌ನಲ್ಲಿ ಜಾಗತಿಕ ರೈಸ್‌ಬ್ರಾನ್ ಎಣ್ಣೆ ಸಮ್ಮೇಳನ

ಅಂತರಾಷ್ಟ್ರೀಯ ರೈಸ್‌ಬ್ರಾನ್ ಎಣ್ಣೆ ಅಸೋಸಿಯೇಶನ್ (IARBO) ಸಹಯೋಗದೊಂದಿಗೆ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ (SEA) ಎಪ್ರಿಲ್ 21 ರಿಂದ 23 ರ ತನಕ ಹೈದರಾಬಾದ್‌ನಲ್ಲಿ 7 ನೇ ಜಾಗತಿಕ ರೈಸ್‌ಬ್ರಾನ್ ಎಣ್ಣೆ ಸಮ್ಮೇಳನ ಆಯೋಜಿಸಿದೆಯೆನ್ನಲಾಗಿದೆ. ಜಾಗತಿಕವಾಗಿ ರೈಸ್‌ಬ್ರಾನ್ ಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಲಾಗುವುದೆನ್ನಲಾಗಿದೆ. ರೈಸ್‌ಬ್ರಾನ್ ಎಣ್ಣೆ ತಯಾರಕ ದೇಶಗಳಾದ ಚೈನಾ, ಥೈಲಾಂಡ್, ಜಪಾನ್, ಪಾಕಿಸ್ಥಾನ ಮತ್ತು ಬಾಂಗ್ಲಾ ದೇಶ ಮುಂತಾದ 400 ಕ್ಕಿಂತಲೂ ಹೆಚ್ಚಿನ ಸಹಯೋಗಗಳು ಪಾಲುಗೊಳ್ಳಲಿದ್ದಾರೆನ್ನಲಾಗಿದೆ. ಈ ಕ್ಷೇತ್ರ ದಲ್ಲಿನ ಆಧುನಿಕ ಸಂಶೋಧನೆ, ಜಾಗತಿಕ ಅವಕಾಶ, ಮೌಲ್ಯ ವರ್ಧನೆ ಮುಂತಾದ ವಿಷಯಗಳಲ್ಲಿ ಮಾಹಿತಿ ವಿನಿಮಯವಾಗಲಿದೆಯೆನ್ನಲಾಗಿದೆ.